ಮಕ್ಕಳ ಕಳ್ಳರ ವದಂತಿ: ಖಾಕಿಗೆ ಚಿಂತೆ!

ಭಿಕ್ಷುಕರ, ಖಾವಿಧಾರಿ, ನಾಗಾಸಾಧುಗಳ ವೇಷದಲ್ಲಿ ದುಷ್ಕರ್ಮಿಗಳೆಂಬ ಗುಲ್ಲು

- **ಜಗದೀಶ ವಿರಕ್ತಮಠ**
  ಕನ್ನಡಪ್ರಭ ವಾರ್ತೆ ಬೆಳಗಾವಿ

ಮಕ್ಕಳ ಕಳ್ಳರು ಬಂದಿದ್ದಾರೆಂಬ ವದಂತಿ ಎಲ್ಲೆಡೆ ಹಬ್ಬಿದೆ. ಮಕ್ಕಳನ್ನು ಕದಿಯಲೆಂದೆ ನಾನಾ ವೇಷಗಳಲ್ಲಿ ಬರುತ್ತಿದ್ದಾರೆ ಎಂದು ಜನರು ಪೂರ್ವಗ್ರಹಪೀಡಿತರಾಗುತ್ತಿರುವ ವದಂತಿಗಳು ಕೂಡ ಕೇಳಿಬರುತ್ತಿವೆ. ಆದರೆ, ಇಂತಹ ಘಟನೆಗಳು ನಡೆದಿರುವುದು ಈಗ ಎಲ್ಲಿಯೂ ಕಂಡುಬಂದಿಲ್ಲ. ಜನರು ಸದ್ಯ ಒಳಗಾಗಿರುವ ಪೂರ್ವಗ್ರಹಪೀಡಿತವನ್ನು ಹೋಗಲಾಡಿಸಲು ಖಾಕಿ ಕೂಡ ಶ್ರಮಿಸಬೇಕಾದ ಅನಿವಾರ್ಯತೆ ಬಂದೊದಗಿದೆ. ಪೊಲೀಸರು ಕೂಡ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈಗ ದೊಡ್ಡ ಸವಾಲಾಗಿ ಪರಿಣಿಸಿದೆ. ಕೇವಲ ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ಇಂತಹ ಊಹೆಯ ಸುದ್ದಿಗಳು ಕೇಳಿಬರುತ್ತಿಲ್ಲ. ಬದಲಾಗಿ ರಾಜ್ಯದ ನಾನಾ ಭಾಗಗಳಲ್ಲಿ ಈ ರೀತಿಯ ಸುದ್ದಿಗಳು ಹರಡಿವೆ.

ಬೆಳಗಾವಿ, ಗದಗ, ಕೊಪ್ಪಳ, ವಿಜಯಪುರ, ಧಾರವಾಡ, ಬಾಗಲಕೋಟೆ, ಹಾವೇರಿ ಸೇರಿದಂತೆ ಇನ್ನಿತರ ಜಿಲ್ಲೆಗಳಲ್ಲಿ ಮಕ್ಕಳ ಕಳ್ಳರ ಹಾವಳಿ ಹೆಚ್ಚಾಗಿದೆ ಎಂಬ ವಿಡಿಯೋ, ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಇದರಿಂದಾಗಿ ಹಳ್ಳಿ, ಪಟ್ಟಣಗಳಲ್ಲಿ ಸಾರ್ವಜನಿಕರು ಭಯಭೀತರಾಗಿದ್ದಲ್ಲದೇ, ತಮ್ಮ ಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಅಲ್ಲದೇ ದಿನದಿಂದ ದಿನಕ್ಕೆ ಮಕ್ಕಳ ಕಳ್ಳರ ಹಾವಳಿ ವದಂತಿ ಹೆಚ್ಚಾಗಿದೆ. ಇನ್ನೂ ಕೆಲವು ಕಡೆಗಳಲ್ಲಿ ದರೋಡೆಕೋರರ ಹಾವಳಿ ಎಂಬುವುದರ ಬಗ್ಗೆ ಚರ್ಚೆಯೂ ಜೋರಾಗಿದೆ. ಈ ಕುರಿತು ಈಗಾಗಲೇ ಬೆಳಗಾವಿ, ಧಾರವಾಡ ಸೇರಿದಂತೆ ನಾನಾ ಜಿಲ್ಲೆಗಳ ಪೊಲೀಸರು ಅಂತಹ ವದಂತಿಯನ್ನು ನಂಬದಂತೆ ಜಾಗೃತಿ ಮೂಡಿಸುತ್ತಿದ್ದಾರೆ.

ಭಿಕ್ಷುಕರ, ಖಾವೀಧಾರಿ, ನಾಗಾಸಾಧು ವೇಷದಲ್ಲಿ ಗ್ರಾಮಕ್ಕೆ ಲಗ್ಗೆ ಎಂಬ ವದಂತಿ: ವಿವಿಧ ಕಡೆಗಳಿಂದ ಆಗಮಿಸಿ ಹಳ್ಳಿಗಳಲ್ಲಿ ಭಿಕ್ಷೆ, ದವಸ ಧಾನ್ಯ, ಹಣ, ಆಹಾರ ಬೇಡಿ ಬದುಕು ಸಾಗಿಸುತ್ತಿರುವವರಿಗೂ ಈ ಮಕ್ಕಳ ಕಳ್ಳರ ವದಂತಿಯಿಂದ ತೀವ್ರ ಸಮಸ್ಯೆಯಾಗಿದೆ. ಕೆಲವು ವಿಡಿಯೋ ಹಾಗೂ ಫೋಟೋಗಳಲ್ಲಿ ಸಾಧು-ಸಂತರು, ನಾಗಾ ಸಾಧುಗಳ ಹಾಗೂ ಭಿಕ್ಷುಕರ ವೇಷದಲ್ಲಿ ಗ್ರಾಮಕ್ಕೆ ಬಂದು ಭಿಕ್ಷೆ ಬೇಡುವ ನೆಪದಲ್ಲಿ ಗ್ರಾಮದಲ್ಲಿನ ಪ್ರತಿ ಮನೆ-ಮನೆಗೆ ಭೇಟಿ ನೀಡಿ, ಮಕ್ಕಳ ಹಾಗೂ ಮನೆಯ ಪರಿಸ್ಥಿತಿ ಬಗ್ಗೆ ತಿಳಿದುಕೊಂಡು, ಯಾರೂ ಇಲ್ಲದ ಸಮಯದಲ್ಲಿ ಮಕ್ಕಳ ಕರೆದುಕೊಂಡು ಹೋಗುತ್ತಾರೆ. ಮನೆಗಳಲ್ಲಿ ಕಳ್ಳತನ ಹಾಗೂ ದರೋಡೆ ಮಾಡುತ್ತಿದ್ದಾರೆ ಎಂಬ ವದಂತಿ ಗ್ರಾಮೀಣ ಭಾಗಗಳಲ್ಲಿ ವ್ಯಾಪಕ ಚರ್ಚೆಯಲ್ಲಿದೆ. ಇದರಿಂದಾಗಿ, ಮಹಿಳೆ, ಮಕ್ಕಳು ಮನೆಯಿಂದ ಹೊರಗೆ ಹೋಗಲು ಆತಂಕ ಪಡುವಂತಾಗಿದೆ. ಇದು ಪೊಲೀಸರ ಚಿಂತೆಗೆ ಕಾರಣವಾಗಿದೆ.

ಪೊಲೀಸರಿಂದ ಜಿಲ್ಲೆಯಾದ್ಯಂತ ಜಾಗೃತಿ

ಜಿಲ್ಲೆಯ 1266 ಗ್ರಾಮಗಳಲ್ಲಿ ಮಕ್ಕಳ ಕಳ್ಳರ ವದಂತಿ ಕುರಿತು ಬುಧವಾರ ಪೊಲೀಸ್ ಇಲಾಖೆಯಿಂದ ಜಾಗೃತಿ ಮೂಡಿಸಲಾಗಿದೆ. ಅಲ್ಲದೇ, ಜನನಿಬಿಡ ಪ್ರದೇಶಗಳಾದ ರೈಲು ನಿಲ್ದಾಣ, ಬಸ್ ನಿಲ್ದಾಣ, ಸಂತೆಗಳಲ್ಲಿ, ಶಾಲೆ-ಕಾಲೇಜುಗಳಲ್ಲಿ ಅಲ್ಲದೇ, ಮನೆಮನೆಗೆ ತೆರಳಿ ಪೊಲೀಸರು ಮಕ್ಕಳ ಕಳವು ಕುರಿತಾದ ವದಂತಿ ಸುಳ್ಳು ಎಂಬುದರ ಬಗ್ಗೆ ಜಾಗೃತಿ ಮೂಡಿಸಿದರು.

ಮಕ್ಕಳ ಕಳ್ಳರ ವದಂತಿ ನಂಬಬೇಡಿ

ಘಟಪ್ರಭಾ: ಸಾರ್ವಜನಿಕರು ಮಕ್ಕಳ ಕಳ್ಳರು ಬಂದಿದ್ದಾರೆ ಎಂಬ ವದಂತಿಗಳಿಗೆ ಕಿವಿ ಕೊಡಬೇಡಿ ಎಂದು ಗೋಕಾಕ ಡಿವೈಎಸ್ಪಿ ಮನೋಜಕುಮಾರ ನಾಯಿಕ ಹೇಳಿದರು.

ಅವರು ಬುಧವಾರ ಸ್ಥಳೀಯ ರೈಲು ನಿಲ್ದಾಣದಲ್ಲಿ ಸಾರ್ವಜನಿಕ ಜಾಗೃತಿ ಸಭೆಯಲ್ಲಿ ಮಾತನಾಡಿದ ಅವರು, ಬೆಳಗಾವಿ ಜಿಲ್ಲೆಯಲ್ಲಿ ಹರಡುತ್ತಿರುವ ಮಕ್ಕಳ ಕಳ್ಳರು ಬಂದಿದ್ದಾರೆ ಎಂಬ ಸುಳ್ಳು ಸುದ್ದಿಗಳ ಬಗ್ಗೆ ಸಾರ್ವಜನಿಕರು ಗಮನ ಹರಿಸಬಾರದು. ಬೇರೆ ಎಲ್ಲಿಯೂ ನಡೆದಂತಹ ಪ್ರಕರಣಗಳ ಸುಳ್ಳು ವಿಡಿಯೋಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ನಡೆದ ಮಕ್ಕಳ ಕಳ್ಳತನ ಪ್ರಕರಣಗಳು ಎಂದು ಬಿಂಬಿಸಲಾಗುತ್ತಿದೆ. ಜಿಲ್ಲೆಯಲ್ಲಿ ಅಂತಹ ಯಾವುದೇ ಪ್ರಕರಣಗಳು ನಡೆದಿಲ್ಲ ಎಂದು

ಸ್ಪಷ್ಟಪಡಿಸಿ, ಯಾವುದೇ ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ 112ಗೆ ಕರೆ ಮಾಡಿ ಎಂದು ಹೇಳಿದರು. ಘಟಪ್ರಭಾ ಪೊಲೀಸ್ ಠಾಣೆಯ ಸಿಪಿಐ ಶ್ರೀಶೈಲ ಬ್ಯಾಕೂಡ, ಸಿಬ್ಬಂದಿಗಳಾದ ವಿಠ್ಠಲ ಕೋಳಿ, ಹಿರಿಯರಾದ ಸುರೇಶಪಾಟೀಲ, ಸಲೀಂಕಬ್ಬೂರ, ಶ್ರೀಕಾಂತ್ ಕುಲಕರ್ಣಿ ಸೇರಿದಂತೆ ಅನೇಕರು ಇದ್ದರು.

ಬೆಳಗಾವಿ ಜಿಲ್ಲೆಯಲ್ಲಿ ಯಾವುದೇ ರೀತಿಯ ಮಕ್ಕಳ ಕಳ್ಳತನ ಪ್ರಕರಣ ದಾಖಲಾಗಿಲ್ಲ. ಇದು ಕೇವಲ ವದಂತಿಯಾಗಿದ್ದು, ಸಾರ್ವಜನಿಕ ಯಾವುದೇ ಕಾರಣಕ್ಕೂ ಭಯ ಪಡಬೇಕಿಲ್ಲ. ಯಾವುದೇ ಕಾರಣಕ್ಕೂ ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು. ಹಾಗೇನಾದರೂ ಗ್ರಾಮದಲ್ಲಿ ಸಂಶಯಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ತಕ್ಷಣ 112ಗೆ ಕರೆ ಮಾಡಿ ಮಾಹಿತಿ ನೀಡಬೇಕು.

- **ಡಾ.ಸಂಜೀವ ಪಾಟೀಲ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

112 ಸಂಖ್ಯೆ ಕರೆ ಮಾಡಿ

ಬೆಳಗಾವಿ ಜಿಲ್ಲೆಯ ನಾಲ್ಕು ಕಡೆ ಈಗಾಗಲೇ ಮಕ್ಕಳ ಕಳ್ಳರು ಎಂದು ಭಾವಿಸಿ ಹಲವು ಅಮಾಯಕರನ್ನು ಸಾರ್ವಜನಿಕರು ಥಳಿಸಿದ್ದಾರೆ. ಚನ್ನಮ್ಮನ ಕಿತ್ತೂರಿನಲ್ಲಿ ಪ್ಲಾಸ್ಟಿಕ್ ಬುಟ್ಟಿ ಮಾರುವವರು, ಖಾನಾಪುರ ತಾಲೂಕಿನ ನಂದಗಡದಲ್ಲಿ ಮಾನಸಿಕ ಅಸ್ವಸ್ಥ, ಸವದತ್ತಿ ತಾಲೂಕಿನ ಶಿರಸಂಗಿಯಲ್ಲಿ ನಾಗಪುರದಿಂದ ಆಶ್ರಮವೊಂದಕ್ಕೆ ಡೋನೇಷನ್ ಕೇಳಲು ಬಂದವರು, ಗೋಕಾಕ ತಾಲೂಕಿನ ಕುಲಗೋಡದಲ್ಲಿ ನಾಗಾಸಾಧುಗಳು ಮಕ್ಕಳ ಕಳ್ಳರೆಂಬ ಶಂಕೆಗೆ ಒಳಗಾಗಿ ಸಾರ್ವಜನಿಕರಿಂದ ಥಳಿತಕ್ಕೆ ಒಳಗಾಗಿದ್ದಾರೆ.

ಪದವಿ ವಿದ್ಯಾರ್ಥಿಗಳ ಪಾಸ್ ಅವಧಿ ವಿಸ್ತರಣೆ

ಬೆಳಗಾವಿ: ಅಂತಿಮ ವರ್ಷದ ಪದವಿ, ಡಿಪ್ಲೋಮಾ, ಸ್ನಾತಕೋತ್ತರ, ವೃತ್ತಿಪರ ಕೋರ್ಸ್, ಸಂಜೆ ಕಾಲೇಜು, ಕಾನೂನು ವಿದ್ಯಾರ್ಥಿಗಳ ಪರೀಕ್ಷೆಗಳು ಬಾಕಿ ಇರುವುದರಿಂದ ವಿದ್ಯಾರ್ಥಿಗಳಿಗೆ ತರಗತಿ, ಪರೀಕ್ಷೆಗಳಿಗೆ ಹಾಜರಾಗಲು ಅವಧಿ ವಿಸ್ತರಿಸಿಕೊಡ ರಶೀದಿ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಪಾಸುಗಳನ್ನು ತೋರಿಸಿ ಅಕ್ಟೋಬರ್ 31ರವರೆಗೆ ಸಂಸ್ಥೆಯ ನಗರ, ಹೊರವಲಯ, ಸಾಮಾನ್ಯ, ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ವಿದ್ಯಾರ್ಥಿಗಳ ಚಾಲ್ತಿ ಬಸ್‌ಪಾಸ್ ಮಾನ್ಯತಾ ಅವಧಿಯು ಸೆ. 30ಕ್ಕೆ ಮುಕ್ತಾಯಗೊಳ್ಳುತ್ತಿರುವದರಿಂದ ನಿಗದಿತ ದಿನಾಂಕದ ನಂತರ ಸದರಿ ಪಾಸುಗಳ ಮಾನ್ಯತಾ ಅವಧಿಯನ್ನು ವಿಸ್ತರಿಸಲಾಗುವದಿಲ್ಲ. ಆದ್ದರಿಂದ ಇಂತಹ ವಿದ್ಯಾರ್ಥಿಗಳಿಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಪ್ರಮುಖ ಬಸ್ ನಿಲ್ದಾಣಗಳ ಪಾಸ್ ಕೌಂಟರ್‌ಗಳಲ್ಲಿ ಬಸ್ ಪಾಸ್ ವಿತರಿಸುವ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿರತ್ತದೆ. ಅಂತಿಮ ದಿನಾಂಕಗಳಂದು ನಿರ್ದಿಷ್ಟ ಪಾಸ್ ಕೌಂಟರ್‌ಗಳಲ್ಲಿ ಉಂಟಾಗಬಹುದಾದ ಅನಗತ್ಯ ಜನದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಗೂ ವಿದ್ಯಾರ್ಥಿಗಳು ತಿಂಗಳ ಕೊನೆಯ ದಿನಾಂಕದವರೆಗೆ ಕಾಯದೆ, ಆದಷ್ಟು ಬೇಗ ಸೇವಾಸಿಂಧು ಆನ್‌ಲೈನ್ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಿ ಬಸ್‌ಪಾಸ್ ಪಡೆಯುವಂತೆ ಹಾಗೂ ಸದರಿ ಸೌಲಭ್ಯದ ಸದುಪಯೋಗ ಪಡೆದು ಸಂಸ್ಥೆಯೊಂದಿಗೆ ಸಹಕರಿಸುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

₹17.01 ಕೋಟಿ ಪರಿಹಾರ ಜಮೆ

ಬೆಳಗಾವಿ: ಜಿಲ್ಲೆಯಲ್ಲಿ ಇತ್ತೀಚೆಗೆ ಅತಿವೃಷ್ಟಿಯಿಂದ ಉಂಟಾಗಿದ್ದ ಬೆಳೆಹಾನಿ ಕುರಿತು ತಕ್ಷಣವೇ ಜಂಟಿ ಸಮೀಕ್ಷೆ ಕೈಗೊಂಡು 11,234 ರೈತರಿಗೆ ಒಟ್ಟಾರೆ ₹17.01 ಕೋಟಿ ಪರಿಹಾರ ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ನಿತೇಶ ಪಾಟೀಲ ತಿಳಿಸಿದ್ದಾರೆ. ಜುಲೈ ಹಾಗೂ ಆಗಷ್ಟ್ ತಿಂಗಳು ಸೇರಿದಂತೆ ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿಯಿಂದ ಬೆಳೆಹಾನಿಯಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತಗೊಂಡ ಜಿಲ್ಲಾಡಳಿತವು ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಂದ ಜಂಟಿ ಸಮೀಕ್ಷೆ ಕೈಗೊಂಡು ಅತ್ಯಂತ ತ್ವರಿತವಾಗಿ ರೈತರಿಗೆ ಪರಿಹಾರ ಒದಗಿಸಿದೆ. ನಾಳೆಯೇ ರೈತರ ಖಾತೆಗೆ ಹಣ ಜಮೆಯಾಗಲಿದೆ ಜಿಲ್ಲೆಯ ಒಟ್ಟು 11,234 ರೈತರ ಖಾತೆಗೆ ಒಟ್ಟಾರೆ ₹170101195 ಜಮೆಯಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BETWEEN ORIGINAL SUIT NO 743/2022
IN THE COURT OF THE X ADDL CIVIL JUDGE & J.M.F.C , BELAGAVI . AT : BELAGAVI
BETWEEN
1. SMT . SHANTA W / O . BABU BELAGAVKAR , Age 76 yrs Occ House-Hold works , Rio # 4516 Chavat Galli Belagavi , Tal & Dist : Belagavi
2.SMT . VIMAL W/O . AÑANT DOMBALE. Age 67 yts Occ HouseHold works , Rio # 2453 , Kamat Galli , Belagavi , Tal & Dist Belagavi
3.SMT . SNEHALATA W / O . SANJAY MENSE , Age : 56 yrs . Ooo HouseHold works Rio # 984 Shiva Road , Parantieshwar Nagar Yellur Tal & Dist Belagavi
4.SMT . LALITA W / O . VILAS PAWAR , Age 56 yrs . Occ HouseHold works Rio # 4501 , Chavat Galli , Belagavi . Tal & Dist . Belagavi
5.SMT . SUNITA W/O . BABU CHOUGULE, Age 57 yrs Occ Housewife Rio , Plot NO . 16A . in Sy No. 114 , Samrudhi Colony Vadagaon . Tal & Dist Belagavi
6.SMT . ANITA W / O , SAMBHAJI PATIL, Age 55 yrs . Oco Housewife , R / o 110/2/2 Shiva Road , Omar Nagar , Angol Tal & Dist . Belagavi
7.SMT . SARITA W/O . ASHOK JADHAV Age 51 yrs Occ Housewife , R / DH No 518 File Gall . Vangson . Tal & Dist Belagavi
8. SHRI . GAJANAN S/O . VASANT GODSE, Age 49 yrs . Occ : Govt Service
8.SHRI . DEEPAK S / O . VASANT GODSE , Age 45 yrs , Occ : Govt Service
9. SHRI DEEPAK S/O VASANT GODSE, Age 45 yrs. Occ: Govt Service
Plaintiff 8 & 9 are R /o H. No. 159 , Khade Bazaar Shahapur . Tal & Dist Belagavi
10. SMT . RANJANA WIO . KISAN KAWALE Age 42 yrs Occ : HouseHold works
11.SHRI . DARSHAN S / O . KISAN KAWALE Age 22 yrs , Occ . Pvt . Service,
12.SHRI . HARSHAN SIO . KISAN KAWALE Age 21 yrs , Occ . Pvt Service , Plaintiff No 10 to 12 areR / o # 4501 / B , Chavat Galli Belagavi . Tal & Dist : Belagavi
13.SOU. POOJA D/O . PAPA KAWALE Age : 30 yrs Occ Household works . R / o . # 132 Konwal Galli Kanabergi , Tal & Dist Belagavi .
... Plaintiffs
AND:-
1. State Govt . of Karnataka , Represented by The Deputy Commissioner , Belagavi
2. The Tahshildar , Belagavi Division Belagavi , Tal & Dist . Belagavi
.... Defendants

PUBLIC NOTICE
WHEREAS, the above mentioned plaintiffs have filed the top noted suit in this Hon'ble Court for obtaining the declaratory decree of legal heirs of the deceased Indu Fakira Kolatkar, who died on 16-02-2020 as the above said plaintiffs are only the class II legal heirs to deceased Indu Fakira Kolatkar.
If anybody is having any right claim and interest in the succession Certificate of the said deceased Late Indu Fakira Koiatkar, they should put their objections in the top noted case before this Hon'ble Court on 26-9-2022 at 10.30 a.m. in person or through counsel duly authorized.
If no objections are received from anybody, then the matter will be heard and determined in accordance with law.
Given under my hand and seal of this Court on this the 12 th day of September 2022
By order of the Court
Shersitedar
Civil Judge & JMFC Court, Belagavi
(Y. K. DIVATE)
Advocate for Plaintiffs
Bench Clerk

CITATION
O. S. No. 88/2022
IN THE COURT OF HON'BLE Xth ADDL CIVIL JUDGE & J.M.F.C. COURT BELAGAVI, AT: BELAGAVI
Between:
1) KARNATAKA VIKAS GRAMEEN BANK ... Plaintiff
And.
1) Smt. Faridabanu Imtiyaz Bagana and others ...Defendants
To,
1) Smt. Fhirdos Taslim Gawas R/o.: EWS 84, Ashok Nagar, Belagavi.
2) Smt. Nikat Ishq Jamadar, R/o.: 29, 1st Cross, Veerbhadra Nagar, Belagavi.
...Defendant No.4 & 5
SUMMONS U/O V RULE 20, (1A) OF C.P.C.
Whereas, the above named plaintiff has instituted the said suit against you the defedant No. 4 & 5, you are hereby summoned to appear in this court in person or through authorized agent on the 26th day of September-2022 at 11:00 AM to answer the claim. Take notice that, in default of your appearance on the day mentioned, the case will be heard and determined in your absence.
Given under my hand and seal of this Court on 30th day of August 2022.
By the order of the Court
Sd/- Bench clerk
Sd/- Shirastedar Civil Judge & J.M.F.C. Court Belgaum
Sd/- S. S. Patil Advocate for Plaintiff

CITATION
O. S. No. 77/2022
IN THE COURT OF HON'BLE Xth ADDL CIVIL JUDGE & J.M.F.C. COURT BELAGAVI, AT: BELAGAVI
Between:
1) KARNATAKA VIKAS GRAMEEN BANK ... Plaintiff
And.
1) Smt. Chandbibi Munirahmed Shaikh and others ...Defendants
To,
1) Smt. Fatima Mehaboobi Balekundri, R/o.: Amin Galli, 8th Cross. Gandhi Nagar, Belagavi.
2) Smt. Jabin Istiyak Buddebai, R/o.: 1070, 8th Cross, New Gandhi Nagar, Belagavi.
3) Smt. Fatima Fayaz Sanadi, R/o.: 341, Rail Nagar, 1st Main, 1st Cross, Sadashiv Nagar, Belagavi.
4) Smt. Nazmeen Jailani Balegaunkar, R/o. New Gandhi Nagar, Belagavi.
...Defendant No.2 to 5
SUMMONS U/O V RULE 20, (1A) OF C.P.C.
Whereas, the above named plaintiff has instituted the said suit against you the defedant No. 2 to 5, you are hereby summoned to appear in this court in person or through authorized agent on the 26th day of September-2022 at 11:00 AM to answer the claim. Take notice that, in default of your appearance on the day mentioned, the case will be heard and determined in your absence.
Given under my hand and seal of this Court on 30th day of August 2022.
By the order of the Court
Sd/- Bench clerk
Sd/- Shirastedar Civil Judge & J.M.F.C. Court Belgaum
Sd/- S. S. Patil Advocate for Plaintiff

ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿಮಿಟೆಡ್
ಸಾರ್ವಜನಿಕ ಸೂಚನೆ
ನಮ್ಮ ಠೇವಣಿದಾರರು, ಸಾಲಗಾರರು, ಗ್ರಾಹಕರುಗಳಿಗೆ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಕೆಳಕಂಡ ಶಾಖೆಗಳು ಅವುಗಳ ಹಾಲಿ ಹಳೆಯ ಆವರಣದಿಂದ ಹೊಸ ಆವರಣಕ್ಕೆ ಜನವರಿ 31, 2023 ರಿಂದ ಪರಿಣಾಮಕ್ಕೆ ಬರುವಂತೆ ಬದಲಾಯಿಸಲಾಗುತ್ತದೆ. ವಿವರಗಳು ಕೆಳಕಂಡಂತಿವೆ:

ಕ್ರ. ಸಂ.	ಶಾಖೆ	ಯಿಂದ	ಗೆ
		ಶಾಖೆ (ಹಾಲಿ ಹಳೇ ಆವರಣ)	(ಹೊಸ ಆವರಣ)
1.	ಬಾಗಲಕೋಟೆ	ಶ್ರೇಯಸ್ ಕಾಂಪ್ಲೆಕ್ಸ್, ಬಸ್ ನಿಲ್ದಾಣದ ಎದುರು, ಆರಾಧನ ಲಾಡ್ಜ್ ಹತ್ತಿರ, ಬಾಗಲಕೋಟೆ- 587101, ಕರ್ನಾಟಕ.	ಸುಕೃತಿ ಕಾಂಪ್ಲೆಕ್ಸ್, 1ನೇ ಮಹಡಿ, ಸೆಕ್ಟರ್ ಸಂ. 05, ಪ್ಲಾಟ್ ಸಂ. 50/ಬಿ, ಆರ್‌ಟಿಒ ಕಚೇರಿ ಎದುರು, ನವನಗರ, ಬಾಗಲಕೋಟೆ- 587103, ಕರ್ನಾಟಕ.
2.	ಬೆಳಗಾವಿ	ಹೆಚ್ ಸಂ. 14, ಎಸ್‌ಬಿಹೆಚ್ ರಸ್ತೆ- 507115, ಕರ್ನಾಟಕ.	ಸಂ. 1561, 2ನೇ ಮಹಡಿ, ಎನ್‌ಎಸ್‌ಎಸ್ ಟ್ರಸ್ಟ್ ಕಟ್ಟಡ, ಮಾರುತಿ ಗಲ್ಲಿ, ಬೆಳಗಾವಿ- 590001, ಕರ್ನಾಟಕ.
3.	ಕಾರ್ಕಳ	ಸುಹಾಗ್ ವಾಣಿಜ್ಯ ಸಂಕೀರ್ಣ, 1ನೇ ಮಹಡಿ, ಮುಖ್ಯ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಕಾರ್ಕಳ- 574103, ಕರ್ನಾಟಕ.	ಗೋಪಾಲ್ ಟವರ್ಸ್, 1ನೇ ಮಹಡಿ, ಬಸ್ ನಿಲ್ದಾಣದ ಹತ್ತಿರ, ಸಾಗರ್ ಹೋಟೆಲ್ ಮೇಲೆ, ಕರ್ನಾಟಕ- 574104, ಕರ್ನಾಟಕ.
4.	ಮೈಸೂರು	7/5, ಎಂಆರ್‌ಎನ್ ಸಿಗ್ನೇಚರ್, 1ನೇ ಮಹಡಿ, ಕೆಹೆಚ್ ರಸ್ತೆ, ಸೆರಸ್ವತಿಪುರಂ, ಮೈಸೂರು- 570009. ಕರ್ನಾಟಕ.	ಸಂ. 1111/1115, ಸಿರಿ ಕಟ್ಟಡ, 1ನೇ ಮಹಡಿ, ವಿನೋಭ ರಸ್ತೆ, ಶಿವರಾಂಪೇಟೆ, ರಾಜ್‌ಕಮಲ್ ಥೇಟರ್ ಹತ್ತಿರ, ಮೈಸೂರು- 570001, ಕರ್ನಾಟಕ.
5.	ವಿಜಯನಗರ್	1019ಎ/44-2, ಸರ್ವೀಸ್ ರಸ್ತೆ, ಎರಡನೇ ಮುಖ್ಯ ರಸ್ತೆ, ವಿಜಯನಗರ- 560040, ಕರ್ನಾಟಕ.	ಸಂ. 1045/43, ಯಶಸ್ವಿನಿ ಕಾಂಪ್ಲೆಕ್ಸ್, 1ನೇ ಮಹಡಿ, 6ನೇ ಮುಖ್ಯ ರಸ್ತೆ, ಎಂಕೆ ಅಹ್ಮದ್ ಸೂಪರ್ ಮಾರ್ಕೆಟ್ ಹತ್ತಿರ, ವಿಜಯನಗರ, ಬೆಂಗಳೂರು- 560040, ಕರ್ನಾಟಕ.
6.	ವಿಲ್ಸನ್‌ಗಾರ್ಡನ್	279/22, 1ನೇ ಮಹಡಿ, ವಿಲ್ಸನ್ ಗಾರ್ಡನ್, ಬೆಂಗಳೂರು- 560027, ಕರ್ನಾಟಕ.	ಸಂ. 259/31, ಅಕ್ಷೋದಯ ಕಟ್ಟಡ, 1ನೇ ಮಹಡಿ, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು- 560027, ಕರ್ನಾಟಕ.
7.	ಬೀದರ್	ಗಣಪತಿ ರಾವ್ ಹಾಲ್‌ವಾಯ್ ಕಟ್ಟಡ, ಅಂಬೇಡ್ಕರ್ ವೃತ್ತ, ಜಡ್ ಎನ್ ರಸ್ತೆ, ಬೀದರ್- 585401, ಕರ್ನಾಟಕ.	ನಂ. 8-9/781, 1ನೇ ಮಹಡಿ, ಎಸ್.ಬಿ. ಟವರ್, ರೈಲ್ವೇ ಸ್ಟೇಷನ್ ರಸ್ತೆ, ಬೀದರ್ -585401, ಕರ್ನಾಟಕ.
8.	ಇಂದಿರಾನಗರ	ಸಂ. 194, 1ನೇ ಮಹಡಿ, 7ನೇ ಕ್ರಾಸ್, ಸಿಎಂಹೆಚ್ ರಸ್ತೆ, ಇಂದಿರಾ ನಗರ, 1ನೇ ಹಂತ, ಸಿಯುಬಿ ಮೇಲೆ, ಬೆಂಗಳೂರು- 560038, ಕರ್ನಾಟಕ.	ನಂ.480, 2ನೇ ಮುಖ್ಯ, ಬಿನ್ನಮಂಗಲ, 2ನೇ ಹಂತ, ಅಡಿಗಾಸ್ ಹೋಟೆಲ್ ಹತ್ತಿರ, ಇಂದಿರಾ ನಗರ, ಬೆಂಗಳೂರು-560038, ಕರ್ನಾಟಕ.
9.	ಬಳ್ಳಾರಿ	5, 1ನೇ ಮಹಡಿ, ಕ್ರಿಸ್ತೋ ಜ್ಯೋತಿನಿವಾಸ್, ಹೆಚ್.ಆರ್. ಗವಿಯಪ್ಪ ವೃತ್ತಿ, (ಮೋತಿ ವೃತ್ತ) ಬಳ್ಳಾರಿ- 583101, ಕರ್ನಾ